**ಸಿ.ಸಿ.ನಂ.: 1727/2024**

ಸಿ.ಡಬ್ಲ್ಯೂ: **6**

ಪಿ.ಡಬ್ಲ್ಯೂ: **4**

(ಇಂದು ದಿನಾಂಕಃ **22-06-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀಮತಿ ಯು.ಬಿ.ಎಂ. ವಕೀಲರಿಂದ**

ನಾನು ಆಟೋ ಚಾಲಕ ವೃತ್ತಿಯನ್ನು ಮಾಡುತ್ತೇನೆ. ಚಾಸಾ.1ರವರು ನನ್ನ ಸಬಂಧಿಕರಾಗಿರುತ್ತಾರೆ. ಅವರು ನನ್ನ ಹೆಂಡತಿಯ ಅಕ್ಕನ ಗಂಡನಾಗಿರುತ್ತಾರೆ. ಘಟನೆ ನಡೆದಿದೆ ಎನ್ನಲಾದ ದಿನ ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತೇನೆ. ನಾನು ನ್ಯಾಯಾಲಯಕ್ಕೆ ಬೆಳಿಗೆಗ 08.30 ಗಂಟೆಗೆ ಬಂದಿರುತ್ತೇನೆ. ನಾನು ನ್ಯಾಯಾಲಯದಿಂದ ಕರೆದುಕೊಂಡು ಬರಲು ಒಬ್ಬನೇ ಹೋಗಿರುತ್ತೇನೆ. ಘಟನೆ ನಡೆದಿದೆ ಎನ್ನಲಾದ ಸಂದರ್ಭದಲ್ಲಿ ತನುಷಾ ಹಾಗೂ ಆತನ ಹೆಂಡತಿ ಇದ್ದರು ಹಾಗೂ ಸುರೇಶ ಇದ್ದರು.

ಆರೋಪಿತರ ಹಾಗೂ ಚಾಸಾ.1ರವರ ನಡುವೆ ಸಿವಿಲ್ ಪ್ರಕರಣ ದಾಖಲಾಗಿರುವ ಕುರಿತಾಗಿ ನನಗೆ ಮಾಹಿತಿ ಇಲ್ಲ. ಆರೋಪಿತರು ನನ್ನ ಅಣ್ಣನ ಅಪ್ಪ, ಮಗ ಹಾಗೂ ಅಳಿಯ ಆಗಿರುತ್ತಾರೆ. ನಾನು ಚಾಸಾ.1ರವರ ಜೊತೆ ಪೊಲೀಸ ಠಾಣೆಗೆ ಹೋಗಿರುವುದಿಲ್ಲ. ನಾನು ಅವರನ್ನು ಕುಮಟಾ ಆಸ್ಪತ್ರೆಯಲ್ಲಿ ಬಿಟ್ಟು ಹೋಗಿರುತ್ತೇನೆ. ಸಾಕ್ಷಿಯು ಮುಂದುವರಿದು ಅಲ್ಲಿ ಆಗುವುದಲ್ಲ ಎಂದು ಕಾರವಾರಕ್ಕೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ.1ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಘಟನೆಯ ಕುರಿತಾಗಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಿ.ಸಿ.ನಂ.: 1727/2024**

ಸಿ.ಡಬ್ಲ್ಯೂ: **6**

ಪಿ.ಡಬ್ಲ್ಯೂ: **4**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ